**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.85/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | ಧರ್ಮಣ್ಣ ಉಪ್ಪಾರ | ಸಿಡಬ್ಲ್ಯೂ | 5 |
| ತಂದೆ ಹೆಸರು | ಕರಬಸಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 47 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಕನಕಾಪುರ ಹಾಲಿವಾಸ ಬೆಂಗಳೂರು | | |

**ದಿಃ 07.08.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ಚಾ.ಸಾ-6 ಇವರ ಪರಿಚಯ ಇರುವದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ವಾಹನ ಜಪ್ತು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗಳಿಗೆ ನಾನು ಎಲ್ಲಿ ಮತ್ತು ಯಾವಾಗ ಯಾವ ವಿಷಯಕ್ಕಾಗಿ ಯಾರ ಯಾರ ಸಮಕ್ಷಮ ಸಹಿ ಮಾಡಿದ್ದೇನೆ ಎಂದು ನನಗೆ ಗೊತ್ತಿರುವದಿಲ್ಲ. ನಿ.ಪಿ-1 ದಾಖಲಾತಿಯನ್ನು ಬರೆಯುವಾಗ ಯಾವುದೇ ವಾಹನವನ್ನು ಅಮಾನತು ಪಡಿಸಿಕೊಂಡಿರುವದಿಲ್ಲ.

2) ಸಾಕ್ಷಿಗೆ 5 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ತಾನು ಇರುವದಾಗಿ ಒಪ್ಪಿದ್ದರಿಂದ, ಸದರಿ ಫೋಟೋಗಳನ್ನು ನಿ.ಪಿ-2 ರಿಂದ 6 ಎಂದು ಗುರುತಿಸಲಾಯಿತು. ನಿ.ಪಿ-2 ರಿಂದ 6 ಫೋಟೋಗಳನ್ನು ಎಲ್ಲಿ ಮತ್ತು ಯಾವಾಗ ಮತ್ತು ಯಾವ ಕಾರಣಕ್ಕಾಗಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿರುವದಿಲ್ಲ.

ಸಿ.ಡಬ್ಲೂ-5, ಪಿ.ಡಬ್ಲೂ-1

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**

3) ನಿ.ಪಿ-1 ರಲ್ಲಿ ಬರೆದಿರುವ ಎಲ್ಲ ವಿಚಾರಗಳನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಅದರಲ್ಲಿ ಬರೆದಿರುವಂತೆ ಅಪಘಾತದಲ್ಲಿ ಭಾಗಿಯಾದ ವಾಹನಗಳನ್ನು ಗ್ರಾಮೀಣ ಪೊಲೀಸ ಠಾಣಾ ಆವರಣದಲ್ಲಿ ನನ್ನ ಹಾಗೂ ಚಾ.ಸಾ-6 ರವರ ಸಮಕ್ಷಮ ನಿ.ಪಿ-1 ರಂತೆ ಜಪ್ತು ಪಂಚನಾಮೆ ಮಾಡಿ, ನಿ.ಪಿ-2 ರಿಂದ 6 ರಂತೆ ಪೋಟೋ ತೆಗೆದಿರುತ್ತಾರೆ ಅಂದರೆ ಸರಿಯಲ್ಲ. ನಿ.ಪಿ-2 ರಿಂದ 6 ಪೋಟೋದಲ್ಲಿ ಕಾಣುವ ವಾಹನಗಳನ್ನೆ ನಿ.ಪಿ-1 ನ್ನು ಜರುಗಿಸುವಾಗ ಅಮಾನತು ಪಡಿಸಿಕೊಂಡಿದ್ದರು ಅಂದರೆ ಸರಿಯಲ್ಲ. ನನಗೆ ನಿ.ಪಿ-1 ರಿಂದ 6 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಯನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.